ದಿನಾಂಕ 07-01-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ. ಎನ್.ಎಸ್. ವಕೀಲರಿಂದ 2, 3, 4 ನೇ ಆರೋಪಿಗಳ ಪರ: -**

ನಾನು ಈಗ ಚಾಲಕ ಅಂತ ಕೆಲಸ ಮಾಡುತ್ತಿದ್ದೇನೆ. 2016 ರಲ್ಲಿ ನಾನು ಕ್ಲೀನರ್ ಅಂತ ಕೆಲಸ ಮಾಡುತ್ತಿದ್ದೆ. ಬಿಂದು ಜೀರಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಕಂಪನಿಯಲ್ಲಿ ನಾನು ಕೆಲಸ ಮಾಡುತ್ತಿದ್ದ ಬಗ್ಗೆ ನಾನು ಪೊಲೀಸರಿಗೆ ಮತ್ತು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಸಾಕ್ಷಿದಾರರು ಸ್ವತಃ ಹೇಳುತ್ತಾರೆ ಅವರ ಕಂಪನಿಯವರು ಕೊಟ್ಟಿರುತ್ತಾರೆ. 2016 ರಲ್ಲಿ ನನಗೆ ಎಷ್ಟು ಸಂಬಳ ಬರುತ್ತಿತ್ತು ಈಗ ನನಗೆ ಜ್ಞಾಪಕದಲ್ಲಿ ಉಳಿದಿಲ್ಲ. ನನಗೆ ಸಂಬಳವನ್ನು ನಗದಾಗಿ ಕೊಡುತ್ತಿದ್ದರು. ಪ್ರಕಾಶ್ ನಾರಾಯಣ್ ಎಂಬುವವರು ನನಗೆ ಸದರಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿಸಿದ್ದರು. ಸದರಿ ಕಂಪನಿಯಲ್ಲಿ ನನ್ನನ್ನು ನೇಮಿಸಿಕೊಂಡ ಬಗ್ಗೆ ನೇಮಕಾತಿ ಪತ್ರ ಕೊಟ್ಟಿಲ್ಲ ನಾನು ಕೆಲಸಕ್ಕೆ ಸೇರಿಕೊಂಡಾಗ ನನ್ನ ಸಂಬಳ 4,000 – 4,500 ಸಾವಿರ ಇತ್ತು. ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಮದುವೆಯಾಗಿರುವುದಿಲ್ಲ. ನನಗೆ ತಂದೆ ತಾಯಿ ಇದ್ದಾರೆ.

ದಿನಾಂಕ 14-06-2016 ರಂದು ಪುತ್ತೂರಿನಿಂದ ನಾನು ಅಸಾ-1 ವಸಂತ್ ಇವರ ಜೊತೆ ಬಂದಿದ್ದೆ. ನಾವು ಪುತ್ತೂರನ್ನು ಆ ದಿವಸ ಮಧ್ಯಾಹ್ನ 12.00 ಗಂಟೆಗೆ ಬಿಟ್ಟೆವು. ನಮಗೆ ಸದರಿ ವಸ್ತುಗಳನ್ನು ತೆಗೆದುಕೊಂಡು ಹೋಗಲು

ಪ್ರಕಾಶ್ ನಾರಾಯಣ್ ಹೇಳಿದ್ದರು. ಜೀರಾ ಮಸಾಲೆಯನ್ನು ನಾವು ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದೆವು. ಅದರ ಜೊತೆ ಬಿಲ್ ಕೊಟ್ಟಿದ್ದರು. ಒಂದು ಬಿಲ್ ನ್ನು ಯಡಿಯೂರಿನಲ್ಲಿ ಮತ್ತು ಇನ್ನೊಂದು ಬಿಲ್ ನ್ನು ಬೆಂಗಳೂರಿನ ನಾಗರಬಾವಿ ಡಿಪೋನಲ್ಲಿ ಕೊಡಲು ಹೇಳಿದ್ದರು. ನಾವು ಪುತ್ತೂರಿನಿಂದ ನೇರವಾಗಿ ಯಡಿಯೂರಿಗೆ ಬಂದೆವು. ಯಡಿಯೂರಿನಲ್ಲಿ ಬಿಲ್ ನ್ನು ಪಡೆದು ಈ ಕುರಿತು ಸ್ವೀಕೃತ ಪ್ರತಿ ಕೊಟ್ಟಿದ್ದು ವಸಂತ ಇವರಿಗೆ ಗೊತ್ತಿರುತ್ತದೆ. ನನಗೆ ಗೊತ್ತಿರುವುದಿಲ್ಲ. ಯಡಿಯೂರಿನಿಂದ ಮುಂದೆ ಹೋಗಿ ಹಾಲ್ಟ್ ಆಗಿ ಬೆಳಿಗ್ಗೆ ಬೆಂಗಳೂರಿಗೆ ಹೋದೆವು. ನಾವು ಮರುದಿನ ಬೆಳಿಗ್ಗೆ 6.00 ಗಂಟೆಗೆ ಬೆಂಗಳೂರು ಕಡೆಗೆ ಹೊರಟೆವು. ನಾವು ಕುಣಿಗಲ್ - ಮಾಗಡಿ ಮಾರ್ಗವಾಗಿ ಬೆಂಗಳೂರಿಗೆ ಹೋದೆವು. ಮಾಗಡಿ ರೋಡ್ ಡಬ್ಬಲ್ ರಸ್ತೆ ಇರುತ್ತದೆ. ಮಧ್ಯದಲ್ಲಿ ಡಿವೈಡರ್ ಹಾಕಿರುತ್ತಾರೆ. ಮಾಗಡಿಯಲ್ಲಿ ಯಾವ ಸರ್ಕಲ್ ಮುಖಾಂತರ ಹೋದೆವು ಅನ್ನುವುದು ನನಗೆ ಗೊತ್ತಿಲ್ಲ. ಅದು ವಸಂತ್ ಇವರಿಗೆ ಗೊತ್ತಿರುತ್ತದೆ. ಮಾಗಡಿಯಿಂದ ಹೋಗುವಾಗ ತಿಪ್ಪಗೊಂಡನಹಳ್ಳಿ, ತಾವರೆಕೆರೆ, ಚೆನ್ನೇನಹಳ್ಳಿ, ಚೋಳನಾಯಕನಹಳ್ಳಿ , ಸುಂಕದಕಟ್ಟೆ ಬರುವುದಿಲ್ಲ. ಮಾಗಡಿ ರಸ್ತೆಯಿಂದ ಬೆಂಗಳೂರಿಗೆ ಬಂದೆವು. (ಮಾಗಡಿಯಿಂದ ತಿರುಗಿಕೊಂಡಾಗ ಬೆಂಗಳೂರು ಎಷ್ಟು ದೂರ ಆಗುತ್ತದೆ ಅಂತ ಸಾಕ್ಷಿದಾರರಿಗೆ ಪ್ರಶ್ನೆ ಮಾಡಿದಾಗ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಅಂತ ಉತ್ತರಿಸಿರುತ್ತಾರೆ. ಮುಂದುವರಿದು ಆರೋಪಿ ಪರ ವಕೀಲರು ಅಂದಾಜು ಎಷ್ಟು ಕಿ.ಮೀ. ಆಗುತ್ತದೆ ಅಂತ ಪುನಃ ಕೇಳಿದ್ದು , ಸಾಕ್ಷಿದಾರರು ಈಗಾಗಲೇ ಆತನಿಗೆ ಗೊತ್ತಿರುವುದಿಲ್ಲ ಅಂತ ಹೇಳಿದ್ದರಿಂದ , ಸಾಕ್ಷಿದಾರರು ಈ ಕುರಿತು ಉತ್ತರ ಹೇಳುವ ಪ್ರಶ್ನೆ ಬರುವುದಿಲ್ಲ) ನಾವು ಮಾಗಡಿಯಿಂದ ತಿರುಗಿಕೊಂಡಾಗ

ಅಲ್ಲಿಂದ ಬೆಂಗಳೂರು 70 ಕಿ.ಮೀ. ದೂರ ಆಗುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ನಾನು ಬೆಂಗಳೂರಿಗೆ ತುಂಬಾ ಸಲ ಸದರಿ ಕರ್ತವ್ಯದಲ್ಲಿ ಬಂದಿರುತ್ತೇನೆ. ರಸ್ತೆಯಲ್ಲಿ ಅಲ್ಲಲ್ಲಿ ಕಿ.ಮೀ. ಬೋರ್ಡ್ ಗಳು ಹಾಕಿರುತ್ತಾರೆ ಅನ್ನುವುದು ನಿಜ. ನಾವು ಮಾಗಡಿಯಿಂದ ತಿರುಗಿಕೊಂಡು ಬೆಂಗಳೂರಿಗೆ ಹೋದ ರಸ್ತೆ ಸಣ್ಣ ರಸ್ತೆ ಇರುತ್ತದೆ ಅನ್ನುವುದು ಸುಳ್ಳು. ಸದರಿ ರಸ್ತೆಯಲ್ಲಿ ಜನರು ಮತ್ತು ವಾಹನಗಳು ಓಡಾಡುವುದಿಲ್ಲ ಅನ್ನುವುದು ಸುಳ್ಳು.

ತಿಪ್ಪಗೊಂಡನಹಳ್ಳಿ ಜಲಾಶಯದ ಹತ್ತಿರ ರಸ್ತೆ ತುಂಬಾ ತಿರುವು ಇರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ಅಲ್ಲಿ ನಿಧಾನವಾಗಿ ವಾಹನಗಳನ್ನು ಓಡಿಸಿಕೊಂಡು ಹೋಗಬೇಕಾಗುತ್ತದೆ ಅನ್ನುವುದು ಸುಳ್ಳು. ಮಾಗಡಿ ರಸ್ತೆಯಿಂದ ಮುಂದೆ ಬೆಂಗಳೂರು ವರೆಗೆ ಎಷ್ಟು ಸಿಗ್ನಲ್ ಗಳು ಬರುತ್ತವೆ ನನಗೆ ಗೊತ್ತಿಲ್ಲ. ನಾನು ಕ್ಯಾಬಿನ್ ನಲ್ಲಿ ಚಾಲಕನ ಪಕ್ಕದಲ್ಲಿ ಕುಳಿತುಕೊಳ್ಳುತ್ತೇನೆ. ನಾವು ಡಿಪೋಕ್ಕೆ ಆ ದಿವಸ ಬೆಳಿಗ್ಗೆ 8.00 ಗಂಟೆಗೆ ಬಂದೆವು. ಸದರಿ ಡಿಪೋವನ್ನು ಬೆಳಿಗ್ಗೆ 9.00 ಗಂಟೆಗೆ ಓಪನ್ ಮಾಡಿದರು. ಅಲ್ಲಿ ವಾಚ್ ಮನ್ ಇರುವುದಿಲ್ಲ. ಅಲ್ಲಿ ಸಿಸಿ ಟಿವಿ ಇದ್ದದ್ದು ನೋಡಿಲ್ಲ. ಡಿಪೋ ಮ್ಯಾನೇಜರ್ ಧನಂಜಯ್ ಡಿಪೋ ಓಪನ್ ಮಾಡಿದರು. ಕೆಲಸದವರು ಅಂದರೆ ಕೂಲಿಗಳು ನಾವು ತೆಗೆದುಕೊಂಡು ಬಂದಿರುವ ವಸ್ತುಗಳನ್ನು ಅನ್‌ಲೋಡ್ ಮಾಡಿದರು. ಅವರು 2 – 3 ಜನರು ಇದ್ದರು. ಸದರಿ ಗೋಡೌನ್ ತುಂಬಾ ದೊಡ್ಡದು ಇರುತ್ತದೆ. ಅಲ್ಲಿ ಎಷ್ಟು ಜನರು ಕೆಲಸ ಮಾಡುತ್ತಾರೆ ನನಗೆ ಗೊತ್ತಿಲ್ಲ. ನಾವು ತೆಗೆದುಕೊಂಡು ಹೋಗಿರುವ ಬಿಲ್ ನ್ನು ಗೋಡೌನ್ ಇವರಿಗೆ ಕೊಟ್ಟಿರುವ ವಿಚಾರ ವಸಂತ್ ಇವರಿಗೆ

ಗೊತ್ತಿರುತ್ತದೆ. ಬೆಳಿಗ್ಗೆ 10.00 ಗಂಟೆಗೆ ಅನ್‌ಲೋಡ್ ಮಾಡುವ ಕೆಲಸ ಮುಗಿಯಿತು.

ಸದರಿ ವಸ್ತುಗಳನ್ನು ವಿತರಣೆ ಮಾಡುವ ಸಬ್ ಡಿಸ್ಟ್ರಿಬ್ಯೂಟರ್ ಗಳು ನನಗೆ ಗೊತ್ತಿರುವುದಿಲ್ಲ. ಸದರಿ ಸಬ್ ಡಿಸ್ಟ್ರಿಬ್ಯೂಟರ್ ಗಳು ಗೋಡೌನ್ ಹತ್ತಿರ ನಿಂತುಕೊಂಡಿರುತ್ತಾರೆ ಅನ್ನುವುದು ಸುಳ್ಳು. 1 ನೇ ಆರೋಪಿ ರುದ್ರಮುನಿ ಈ ರೀತಿ ವಸ್ತುಗಳನ್ನು ತೆಗೆದುಕೊಂಡು ಹೋಗಲು ಗೋಡೌನ್ ಹತ್ತಿರ ಬರುತ್ತಿದ್ದು , ವಾಹನಗಳನ್ನು ಪಾರ್ಕಿಂಗ್ ಮಾಡುವ ವಿಚಾರದಲ್ಲಿ ನಮಗೂ ಮತ್ತು ಅವರಿಗೂ ಗಲಾಟೆ ಆಗಿತ್ತು ಅನ್ನುವುದು ಸುಳ್ಳು.

ನಾವು ಬೆಳಿಗ್ಗೆ 10.00 ಗಂಟೆಗೆ ಸದರಿ ಗೋಡೌನ್ ನಿಂದ ಪುತ್ತೂರು ಕಡೆಗೆ ಹೊರಟೆವು. ನಾಗರಬಾವಿಯಿಂದ ಒಂದೇ ರಸ್ತೆಯಲ್ಲಿ ಬಂದರೆ ಮುಂದೆ ನಮಗೆ ಬೆಂಗಳೂರು - ಪುಣೆ ರಾಷ್ಟ್ರೀಯ ಹೆದ್ದಾರಿ ಸಿಗುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ಸುಂಕದಕಟ್ಟೆಯಿಂದ ನೈಸ್ ರಸ್ತೆಗೆ ಹೋಗಲು ಒಂದು ರಸ್ತೆ ಇರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ನಾವು ಹೋಗಿರುವ ರಸ್ತೆಯಲ್ಲಿ ಪುನಃ ವಾಪಸ್ ಬರುತ್ತಿದ್ದೆವು. ಸದರಿ ರಸ್ತೆಯಲ್ಲಿ ಬ್ಯಾಡರಹಳ್ಳಿ , ಸುಂಕದಕಟ್ಟೆ , ಅಂಜನಾನಗರ , ಚೆನ್ನೇನಹಳ್ಳಿ ಸಿಗುತ್ತವೆ ಅನ್ನುವುದು ನನಗೆ ಗೊತ್ತಿಲ್ಲ. ನಾನು, ವಸಂತ್ ಮತ್ತು ವ್ಯವಸ್ಥಾಪಕ ಧನಂಜಯ್ ಇವರುಗಳು ನಮ್ಮ ಕಂಪನಿಗೆ ಗೊತ್ತಿಲ್ಲದಂತೆ ಸದರಿ ಊರುಗಳಲ್ಲಿರುವ ಅಂಗಡಿಗಳಿಗೆ ನಮ್ಮ ಕಂಪನಿಗೆ ಗೊತ್ತಿಲ್ಲದಂತೆ ವಸ್ತುಗಳನ್ನು ಅಕ್ರಮವಾಗಿ ಕೊಡುತ್ತಿದ್ದೆವು ಅನ್ನುವುದು ಸುಳ್ಳು. ಈ ರೀತಿ ವಸ್ತುಗಳನ್ನು ಕೊಟ್ಟು ಹಣವನ್ನು ಸಂಗ್ರಹಿಸಲು ನಾವು ಸದರಿ ರಸ್ತೆಯಲ್ಲಿ ಹೋಗಿ ವಾಪಸ್ ಬರುತ್ತಿದ್ದೆವು ಅನ್ನುವುದು ಸುಳ್ಳು. ಈ ವಿಷಯ 1 ನೇ ಆರೋಪಿ ರುದ್ರಮುನಿಗೆ ಗೊತ್ತಾಗಿ ಅವನು ಈ ಕುರಿತು

ನಮಗೆ ಪ್ರಶ್ನೆ ಮಾಡಿದ್ದ ಅನ್ನುವುದು ಸುಳ್ಳು. ಈ ವಿಷಯ ಅವನಿಗೆ ಗೊತ್ತಾಗಿದೆ ಅಂತ ಹೇಳಿ ನಾವು ಅವನ ಮೇಲೆ ದ್ವೇಷ ಸಾಧಿಸುತ್ತಿದ್ದೆವು ಅನ್ನುವುದು ಸುಳ್ಳು. ಕಂಪನಿಯವರು ನಮಗೆ ಕೊಡುತ್ತಿರುವ ಸಂಬಳ ಸಾಕಾಗದೇ ಇರುವುದರಿಂದ ನಾವು ಮೇಲೆ ಹೇಳಿದಂತೆ ವಸ್ತುಗಳನ್ನು ಅಂಗಡಿಗಳಿಗೆ ಕೊಟ್ಟು ಹಣವನ್ನು ಪಡೆದು ಅಕ್ರಮ ಸಂಪಾದನೆ ಮಾಡುತ್ತಿದ್ದೆವು ಅನ್ನುವುದು ಸುಳ್ಳು. ಈ ಉದ್ದೇಶಕ್ಕಾಗಿ ನಾವು ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗದೇ ಸಣ್ಣ ರಸ್ತೆಯಲ್ಲಿ ಬರುತ್ತಿದ್ದೆವು ಅನ್ನುವುದು ಸುಳ್ಳು.

ನಮ್ಮ ಮೇಲೆ 1 ನೇ ಆರೋಪಿ ರುದ್ರಮುನಿ ನಮ್ಮ ಕಂಪನಿಗೆ ದೂರು ಕೊಡಬಹುದು ಅಂತ ಹೇಳಿ ನಾವು ಅವನ ಮೇಲೆ ಇದೊಂದು ಸುಳ್ಳು ದೂರನ್ನು ಕೊಟ್ಟಿರುತ್ತೇವೆ ಅನ್ನುವುದು ಸುಳ್ಳು.

ಬೈಪಾಸ್ ರಸ್ತೆಯಲ್ಲಿ ವಾಹನಗಳು ಗಂಟೆಗೆ 100 ರಿಂದ 120 ಕಿ.ಮೀ. ವೇಗದಲ್ಲಿ ಹೋಗುತ್ತಿರುತ್ತವೆ ಅನ್ನುವುದು ನಿಜ. ಈ ರೀತಿ ಹೋಗುವ ವಾಹನಗಳನ್ನು ತಕ್ಷಣವೇ ನಿಲ್ಲಿಸಲು ಆಗುವುದಿಲ್ಲ ಅಂದರೆ ನಮ್ಮ ವಾಹನ ಅಷ್ಟು ವೇಗದಲ್ಲಿ ಹೋಗುತ್ತಿರಲಿಲ್ಲ. ಸಾಕ್ಷಿದಾರನಿಗೆ ಆರೋಪಿ ಪರ ವಕೀಲರು ಈ ರೀತಿ ವೇಗದಲ್ಲಿ ವಾಹನಗಳನ್ನು ಓಡಿಸಿಕೊಂಡು ಹೋಗುತ್ತಿದ್ದರೆ ತಕ್ಷಣವೇ ವಾಹನವನ್ನು ನಿಲ್ಲಿಸಲು ಆಗುತ್ತದೆಯೋ ಅಥವಾ ಇಲ್ಲವೋ ಅಂತ ಕೇಳಲಾಗಿ ಆತ ನಿಲ್ಲಿಸಬಹುದು ಅಂತ ಉತ್ತರಿಸಿರುತ್ತಾನೆ. ಇಷ್ಟು ವೇಗದಲ್ಲಿ ವಾಹನ ಹೋಗುತ್ತಿದ್ದರೆ ಅದನ್ನು ತಕ್ಷಣವೇ ನಿಲ್ಲಿಸಲು ಆಗುವುದಿಲ್ಲ ಅನ್ನುವುದು ಸುಳ್ಳು. ಈ ವಿಷಯ ನನಗೆ ಗೊತ್ತಿದ್ದರೂ ಸಹಿತ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ನಮ್ಮ ವಾಹನ ಅಪಘಾತವಾದರೆ ನಾವು ಪೊಲೀಸರಿಗೆ ಕೂಡಲೇ ತಿಳಿಸಬೇಕಾಗುತ್ತದೆ ಅನ್ನುವುದು ನಿಜ. ದ್ವಿಚಕ್ರ

ವಾಹನದವರು ಬಂದು ನಮ್ಮ ಲಾರಿಗೆ ಅಡ್ಡಹಾಕಿದಾಗ ನಮ್ಮ ಲಾರಿ 40 ರಿಂದ 60 ಕಿ.ಮೀ. ವೇಗದಲ್ಲಿ ಗಂಟೆಗೆ ಹೋಗುತ್ತಿತ್ತು. ಅದು ರಾಷ್ಟ್ರೀಯ ಹೆದ್ದಾರಿ ಇರುತ್ತದೆ. ಅಲ್ಲಿ ಗಂಟೆಗೆ 100 ಕಿ.ಮೀ. ವೇಗದಲ್ಲಿ ವಾಹನಗಳ ಓಡಿಸಬೇಕಾಗುತ್ತದೆ ಅನ್ನುವುದು ಸುಳ್ಳು.

ಸದರಿ ಘಟನೆ ನಡೆದ ಸ್ಥಳ ಕುಣಿಗಲ್ ನಿಂದ 10 – 15 ಕಿ.ಮೀ. ದೂರ ಆಗಬಹುದು. ಘಟನೆಯಾದ ತಕ್ಷಣವೇ ನಾವು ಪೊಲೀಸ್ ಠಾಣೆಗೆ ಹೋಗಲಿಲ್ಲ. ನಮ್ಮ ಮ್ಯಾನೇಜರ್ ಇವರಿಗೆ ವಿಷಯ ತಿಳಿಸಿದೆವು. ಸದರಿ ಘಟನೆ 10–15 ನಿಮಿಷ ನಡೆಯಿತು. ಆಗ ಬೆಳಿಗ್ಗೆ 11.55 ಆಗಿತ್ತು. ವ್ಯವಸ್ಥಾಪಕರಿಗೆ ವಿಷಯ ತಿಳಿಸಿದಾಗ ಅವರು ಸ್ಥಳಕ್ಕೆ ಬರಲಿಲ್ಲ. ನಾವು ಮಧ್ಯಾಹ್ನ 3–4 ಗಂಟೆಗೆ ಪೊಲೀಸ್ ಠಾಣೆಗೆ ಹೋದೆವು. ಅಲ್ಲಿಯವರೆಗೆ ನಾವು ಘಟನಾ ಸ್ಥಳದಲ್ಲಿ ಇದ್ದೆವು. ಘಟನೆ ನಡೆದ ಸ್ಥಳ ರಾಷ್ಟ್ರೀಯ ಹೆದ್ದಾರಿಯಾಗಿದ್ದರಿಂದ ಅಲ್ಲಿ ಸಾಕಷ್ಟು ವಾಹನಗಳು ಮತ್ತು ಜನರು ಓಡಾಡುತ್ತಾ ಇರುತ್ತಾರೆ ಅನ್ನುವುದು ನಿಜ. ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುವವರು ಇರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ. ನಾವು ಆ ತಕ್ಷಣವೇ ರಸ್ತೆಯಲ್ಲಿ ಹೋಗುತ್ತಿರುವ ವಾಹನದವರಿಗೆ ವಿಷಯವನ್ನು ತಿಳಿಸಲು ಪ್ರಯತ್ನಿಸಿದರೂ ಸಹಿತ ಅವರು ಯಾರೂ ತಮ್ಮ ವಾಹನವನ್ನು ನಿಲ್ಲಿಸಲಿಲ್ಲ. ನಮ್ಮ ವಾಹನದ ಬೀಗವನ್ನು ಸದರಿ ವ್ಯಕ್ತಿಗಳು ಎತ್ತಿಕೊಂಡು ಹೋಗಿದ್ದರಿಂದ ಮತ್ತು ಚಾಲಕನಿಗೆ ಶಾಕ್ ಆಗಿದ್ದರಿಂದ ಮಧ್ಯಾಹ್ನ 3–4 ಗಂಟೆಯವರೆಗೆ ನಾವು ಪೊಲೀಸ್ ಠಾಣೆಗೆ ಹೋಗಲಿಲ್ಲ. ಚಾಲಕನಿಗೆ ಹೆದರಿಕೆ ಆಗಿತ್ತು. ಪ್ರಜ್ಞೆ ತಪ್ಪಿರಲಿಲ್ಲ. ಪೊಲೀಸರಿಗೆ ವಿಷಯ ತಿಳಿಸುವುದು ನನಗೆ ಗೊತ್ತಿರಲಿಲ್ಲ. ನಾನು ಕ್ಲೀನರ್ ಇದ್ದೆ. ನಂತರ ಪೊಲೀಸ್ ಠಾಣೆಗೆ ನಾನು ಮತ್ತು ವಸಂತ್ ಹೋದೆವು. ವಸಂತ್ ಈತನು ಪೊಲೀಸ್ ಠಾಣೆಗೆ ವಾಹನವನ್ನು

ತೆಗೆದುಕೊಂಡು ಹೋದ. ಘಟನಾ ಸ್ಥಳದಿಂದ ಪೊಲೀಸ್ ಠಾಣೆಯವರೆಗೆ ವಸಂತ್ ವಾಹನವನ್ನು ಓಡಿಸಿಕೊಂಡು ಹೋದ. ಪೊಲೀಸ್ ಠಾಣೆಯ ಮುಂದೆ ನಮ್ಮ ವಾಹನವನ್ನು ನಿಲ್ಲಿಸಿದ ನಂತರ ಪೊಲೀಸ್ ಠಾಣೆಯ ಒಳಗಡೆ ವಸಂತ್ ಹೋದ. ನಾನು ಠಾಣೆಯ ಒಳಗಡೆ ನಂತರ ಹೋದೆ. ಸಂಜೆ 4-5 ಗಂಟೆಗೆ ಹೋದೆ. ನಾನು ಹೋಗುವಷ್ಟರಲ್ಲಿ ವಸಂತ್ ಪೊಲೀಸರಿಗೆ ದೂರು ಕೊಟ್ಟಿದ್ದ. ನಮ್ಮ ಕಂಪನಿಯವರು ಪೊಲೀಸ್ ಠಾಣೆಗೆ ಬಂದ ನಂತರ ನಾನು ಪೊಲೀಸ್ ಠಾಣೆಯಿಂದ ಹೊರಗಡೆ ಬಂದೆ. ನಮ್ಮ ಕಂಪನಿಯ ಪ್ರಕಾಶ್ ನಾರಾಯಣ್ ಮತ್ತು ಇತರರು ಪೊಲೀಸ್ ಠಾಣೆಗೆ ಬಂದಿದ್ದರು. ವಸಂತ್ ಮೊದಲೇ ಪೊಲೀಸರಿಗೆ ದೂರಿನಲ್ಲಿರುವ ವಿಷಯಗಳನ್ನು ಹೇಳಿ ಬರೆಸಿದ್ದ. ದೂರು ಕೊಡುವಾಗ ಯಾವ ಅಧಿಕಾರಿ ಠಾಣೆಯಲ್ಲಿದ್ದರು ನನಗೆ ಗೊತ್ತಿಲ್ಲ. ಯಾವ್ಯಾವ ಅಧಿಕಾರಿಗಳು ಪೊಲೀಸ್ ಠಾಣೆಯಲ್ಲಿ ಇರುತ್ತಾರೆ ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಯಿಂದ ಹೊರಗೆ ಬಂದ ನಂತರ ನಾನು ಪುನಃ ಪೊಲೀಸ್ ಠಾಣೆಯ ಒಳಗೆ ಹೋಗಿಲ್ಲ. ಪೊಲೀಸ್ ನವರು ನನ್ನನ್ನು ಈ ಕುರಿತು ವಿಚಾರಣೆ ಮಾಡಿರುತ್ತಾರೆ. ನಾನು ಹೇಳಿದಂತೆ ಬರೆದುಕೊಂಡರು. ಈ ರೀತಿ ಬರೆದುಕೊಂಡಾಗ ಸಮಯ ಎಷ್ಟು ಆಗಿತ್ತು ನನಗೆ ಈಗ ಜ್ಞಾಪಕ ದಲ್ಲಿ ಉಳಿದಿಲ್ಲ. ಧರ್ಮೇಂದ್ರ ಮತ್ತು ಗಂಗರಾಜು ಅನ್ನುವವರು ಬರೆದುಕೊಂಡರು. ಅವರು ಕೈ ಯಿಂದ ಬರೆದುಕೊಂಡರು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಡದಿದ್ದರೂ ಸಹಿತ, ಕೊಟ್ಟಿರುತ್ತೇನೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸುಳ್ಳು.

ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಅನ್ನುವುದು ಸುಳ್ಳು. ನಾವು ಮೇಲೆ ಹೇಳಿದಂತೆ ಅಕ್ರಮವಾಗಿ ವಸ್ತುಗಳನ್ನು ಮಾರಾಟ ಮಾಡಿ ಹಣ ಪಡೆಯುತ್ತಿದ್ದರಿಂದ , 1 ನೇ ಆರೋಪಿ ಮತ್ತು ಅವನ ಸ್ನೇಹಿತರ ಮೇಲೆ

ಇದೊಂದು ಸುಳ್ಳು ಕೇಸು ಹಾಕಿ ಈಗ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸುಳ್ಳು. ನಾನು ದಾಖಲೆಗೆ ಸಹಿ ಹಾಕಿರುತ್ತೇನೆ. ಎಷ್ಟು ಕಡೆ ಹಾಕಿರುತ್ತೇನೆ ಜ್ಞಾಪಕದಲ್ಲಿ ಉಳಿದಿಲ್ಲ. ಯಾವುದೇ ವಿಷಯ ನನಗೆ ಗೊತ್ತಿಲ್ಲದಿದ್ದರೂ ಕೂಡ ವಸಂತ್ ಮತ್ತು ಧನಂಜಯ ಇವರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ಆರೋಪಿತರು ನಮ್ಮ ಲಾರಿಗೆ ಅಡ್ಡಹಾಕಿ ನಮ್ಮಿಂದ ಹಣವನ್ನು ಕಿತ್ತುಕೊಂಡು ಹೋಗಿಲ್ಲ ಅನ್ನುವುದು ಸುಳ್ಳು.

ನಾನು ತನಿಖಾಧಿಕಾರಿಯ ಮುಂದೆ ನಮ್ಮ ಪುತ್ತೂರಿನ ಮ್ಯಾನೇಜರ್ ಇವರು ನಾಗರಬಾವಿ ಡಿಪೋದವರು ಹಣ ಕೊಡುತ್ತಾರೆ ತೆಗೆದುಕೂಂಡು ಬನ್ನಿರಿ ಅಂತ ಹೇಳಿದ್ದು ಆ ಪ್ರಕಾರ ವಸಂತ್ ಇವರು ಹಣ ಸಂಗ್ರಹಿಸಿದ್ದರು ಅನ್ನುವುದನ್ನು ಹೇಳಿಲ್ಲ ಅನ್ನುವುದು ಸುಳ್ಳು.

ನಾವು ಯಡಿಯೂರಿನಲ್ಲಿ 300 ಬಾಕ್ಸ್ ಇಳಿಸಿದೆವು , ನಂತರ ಮರುದಿನ ನಾಗರಬಾವಿಯ ಡಿಪೋಕ್ಕೆ ಹೋದೆವು , ಅಲ್ಲಿ 100 ಬಾಕ್ಸ್ ಇಳಿಸಿದೆವು ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವುದು ಸುಳ್ಳು. ದಿನಾಂಕ 14/15-06-2016 ರಂದು ಬೆಂಗಳೂರಿಗೆ ಬಂದೇ ಇಲ್ಲ ಅನ್ನುವುದು ಸುಳ್ಳು. ಪುತ್ತೂರಿನ ಮ್ಯಾನೇಜರ್ ಇವರು ಹೇಳಿದ್ದರಿಂದ , ನಾಗರಬಾವಿಯ ಡಿಪೋದಿಂದ ನಾವು ಹಣವನ್ನು ಸಂಗ್ರಹಿಸಿದೆವು ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವುದು ಸುಳ್ಳು. ನಾವು ಹಣವನ್ನು ತೆಗೆದುಕೊಂಡು ಲಾರಿಯಲ್ಲಿ ಪುತ್ತೂರಿನ ಕಡೆಗೆ ಹೋಗುವಾಗ ಎರಡು ಪಲ್ಸರ್ ವಾಹನಗಳಲ್ಲಿ ಬಂದರು ಮತ್ತು ನಮ್ಮ ವಾಹವನ್ನು ಅಡ್ಡ ಹಾಕಿ ಸದರಿ ಹಣವನ್ನು ಕಿತ್ತುಕೊಂಡು ಹೋದರು ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವುದು

ಸುಳ್ಳು. ಮೂರು ಜನರು ನನಗೆ ಕೊರಳ ಪಟ್ಟಿ ಹಿಡಿದು ಎಳೆದಾಡಿದರು ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವುದು ಸುಳ್ಳು. ನನಗೆ ಇಬ್ಬರು ಕೊರಳ ಪಟ್ಟಿ ಹಿಡಿದು ಎಳೆದಾಡಿದ್ದು ಚಾಲಕನಿಗೆ ಮೂರು ಜನರು ಕೊರಳ ಪಟ್ಟಿ ಹಿಡಿದು ಎಳೆದಾಡಿದರು. ಬಾಕ್ಸ್ ನಲ್ಲಿ ಏನು ಇದೆ ಅಂತ ಕೇಳಿದ್ದು ಆಗ ನಾನು ಜ್ಯೂಸ್ ಇರುತ್ತದೆ ಅಂತ ಹೇಳಿದ್ದು ಆಗ ಹೆಲ್ಮೆಟ್ ನಿಂದ ನನಗೆ ಹೊಡೆಯಲು ಬಂದಿದ್ದು ಆಗ ನಾನು ತಪ್ಪಿಸಿ ಕೊಂಡು ವಾಹನದ ಹಿಂದುಗಡೆ ಓಡಿ ಹೋದೆ ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವುದು ಸುಳ್ಳು. ಸದರಿ ಬಾಕ್ಸ್ ನ್ನು ಮತ್ತು ವಾಹನದ ಕೀ ಅನ್ನು ಎತ್ತಿಕೊಂಡು ಹೊರಟುಹೋದರು ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವುದು ಸುಳ್ಳು. ಪೊಲೀಸ್ ಠಾಣೆಗೆ ಹೋದ ನಂತರ ಪುನಃ ನಮಗೆ ಪೊಲೀಸರು ಬರುವಂತೆ ನೋಟೀಸು ಕೊಟ್ಟಿದ್ದರು. ಈಗ ನಮ್ಮ ಹತ್ತಿರ ಅದು ಇರುವುದಿಲ್ಲ. ಪುನಃ ನಾನು ಪೊಲೀಸ್ ಠಾಣೆಗೆ ಎಂದೂ ಹೋಗಿಲ್ಲ, ಯಾವುದೇ ನೋಟೀಸನ್ನು ಪೊಲೀಸರು ನನಗೆ ಕೊಟ್ಟಿಲ್ಲ ಅನ್ನುವುದು ಸುಳ್ಳು. 1 ನೇ ಆರೋಪಿಯನ್ನು ಬಿಟ್ಟರೆ ನಾನು ಉಳಿದ ಆರೋಪಿತರನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಅನ್ನುವುದು ಸುಳ್ಳು. ಪೊಲಿಸರು ಹೇಳಿಕೊಟ್ಟಿದ್ದರಿಂದ ಮುಖ್ಯ ವಿಚಾರಣೆಯಲ್ಲಿನ ವಿಷಯಗಳನ್ನು ನಾನು ಹೇಳಿರುತ್ತೇನೆ ಅನ್ನುವುದು ಸುಳ್ಳು. ಈ ಘಟನೆಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂದ ಇಲ್ಲದಿದ್ದರೂ ಕೂಡ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ದ್ವಿಚಕ್ರ ವಾಹನಗಳು ಒಂದೇ ಬಣ್ಣದ್ದು ಮಾರುಕಟ್ಟೆಯಲ್ಲಿ ಬೇರೆ ಇರಬಹುದು. ಇದೇ ವಾಹನವೆಂದು ನಾನು ಕಲರ್ ಆಧಾರದ ಮೇಲೆ ಹೇಳುತ್ತೇನೆ. ಕಲರ್ ಹೊರತುಪಡಿಸಿ ಬೇರೆ

ಯಾವುದೇ ಗುರುತು ಸದರಿ ವಾಹನಗಳ ಮೇಲೆ ಇರಲಿಲ್ಲ. ಸದರಿ ದ್ವಿ ಚಕ್ರ ವಾಹನಗಳು ಆ ಸಮಯದಲ್ಲಿ ಅಲ್ಲಿಗೆ ಬಂದಿರಲಿಲ್ಲ ಅನ್ನುವುದು ಸುಳ್ಳು.

(ಉಳಿದ ಆರೋಪಿ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು